

بِسْمِ اللهِ الرَّحْمَنِ الرَّحِيم

# ಯು.ಕೆ. ಜಲ್ಸ ಪ್ರಾರಂಭ – ಜಲ್ಸದಲ್ಲಿ ಭಾಗವಹಿಸುವವರಿಗೆ ಕೆಲವು ಪ್ರಾಮುಖ್ಯ ನಿರ್ದೇಶಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಲಂಡನಿನ **'ಹದೀಖತುಲ್ ಮಹ್‌ದಿ'**ಯಿಂದ **12–08–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಈ ದಿನ ಬ್ರಿಟನಿನ ಅಹ್ಮದಿಯಾ ಜಮಾಅತಿನ ಜಲ್ಸ ಸಾಲಾನ ಪ್ರಾರಂಭವಾಗುತ್ತಿದೆ. ಇನ್‌ಶಾಅಲ್ಲಾಹ್– ಸಂಜೆ ಔಪಚಾರಿಕ ಉದ್ಘಾಟನೆ ನಡೆಯುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಲ್ಸದಲ್ಲಿ ಭಾಗವಹಿಸುವವರ ಬಗ್ಗೆ ಯಾವ ಪ್ರತೀಕ್ಷೆಗಳನ್ನು ಹೊಂದಿದ್ದರೋ ಆ ಪ್ರತೀಕ್ಷೆಗಳನ್ನು ಜಲ್ಸದಲ್ಲಿ ಭಾಗವಹಿಸುವವರು ಈಡೇರಿಸುವವರಾಗುವಂತೆ ಅಲ್ಲಾಹನು ಮಾಡಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಲ್ಸದಲ್ಲಿ ಭಾಗವಹಿಸುವವರಿಗೆ ಮಾಡಿದ ಪ್ರಾರ್ಥನೆಗಳಿಗೆ ಜಲ್ಸದಲ್ಲಿ ಭಾಗವಹಿಸುವ ಎಲ್ಲರೂ ವಾರೀಸುದಾರರಾಗುವಂತೆ ಅಲ್ಲಾಹನು ಮಾಡಲಿ. ಪ್ರತಿಯೊಬ್ಬ ಅಹ್ಮದಿ ತಿಳಿದಿರುವ ವಿಷಯ ಮತ್ತು ವಿಶಿಷ್ಟವಾಗಿ ತಿಳಿಯಬೇಕಾದ ವಿಷಯವೇನೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿರುವರು ಜಲ್ಸದಲ್ಲಿ ಭಾಗವಹಿಸುವುದು ಯಾವುದೇ ಲೌಕಿಕ ಜಾತ್ರೆಗಳಲ್ಲಿ ಸೇರುವ ಹಾಗೆ ಅಲ್ಲ. ಆದುದರಿಂದ ಜಲ್ಸಕ್ಕೆ ಬಂದು ಸೇರುವ ಎಲ್ಲರು ಸಹ ತಮ್ಮ ಧಾರ್ಮಿಕ ಜ್ಞಾನದಲ್ಲಿ ಮತ್ತು ಆಧ್ಯಾತ್ಮಿಕತೆಯಲ್ಲಿ ಅಭಿವೃದ್ಧಿ ಗಳಿಸುವುದನ್ನು ತಮ್ಮ ಶ್ರದ್ಧೆಯ ಕೇಂದ್ರವಾಗಿಡಬೇಕು. ಇಂತಹ ಮನೋಭಾವ ಹೊಂದದೆ ಜಲ್ಸಕ್ಕೆ ಬರುವವರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಹಳ ಅತೃಪ್ತಿಯನ್ನು ಪ್ರಕಟಿಸಿರುವರು.

ಜಲ್ಸಕ್ಕೆ ಬಂದು ಸೇರುವವರು ಜಲ್ಸದ ಕಾರ್ಯಕ್ರಮಗಳನ್ನು ಮೌನದಿಂದ ಕುಳಿತುಕೊಂಡು ಆಲಿಸುವುದನ್ನು ದೃಢಪಡಿಸಬೇಕು. ಜಲ್ಸದಲ್ಲಿ ಮಾಡಬೇಕಾದ ಭಾಷಣಗಳ ಶೀರ್ಷಿಕೆಗಳನ್ನು ಒಂದು ಸಮಿತಿ ನನಗೆ ಕಳುಹಿಸಿಕೊಡುತ್ತದೆ. ಅವುಗಳಿಂದ ಏಳು–ಎಂಟು ಶೀರ್ಷಿಕೆಗಳನ್ನು ನಾನು ಆಯ್ಕೆ ಮಾಡುತ್ತೇನೆ. ಈ ಭಾಷಣಗಳ ಶೀರ್ಷಿಕೆಗಳನ್ನು ಭಾಷಣಗಾರರಿಗೆ ಕಳುಹಿಸಿಕೊಡಲಾಗುತ್ತಿದೆ. ಪ್ರತಿಯೊಬ್ಬ ಭಾಷಣಗಾರ ತನ್ನ ಭಾಷಣ ಸಿದ್ಧಪಡಿಸಲು ಹಲವು ದಿನಗಳನ್ನು ಮತ್ತು ಕೆಲವು ಸಾರಿ ಒಂದು ತಿಂಗಳಿಗಿಂತ ಹೆಚ್ಚು ಕಾಲ ಪರಿಶ್ರಮ ನಡೆಸಿ ಭಾಷಣ ಸಿದ್ಧಪಡಿಸುತ್ತಾರೆ. ಹಾಗೂ ಅವರು ತಮ್ಮ ಭಾಷಣವನ್ನು ತಮಗೆ ನೀಡಲಾದ ಕಾಲಾವಧಿಯೊಳಗೆ ಸಮಗ್ರವಾದ ವಿಷಯ ವಿವರಣೆಯೊಂದಿಗೆ ಸಾದರ ಪಡಿಸಲು ಬಹಳ ಕಷ್ಟಪಡುತ್ತಾರೆ. ಆದುದರಿಂದ ಜಲ್ಸದಲ್ಲಿ ಭಾವಹಿಸುವ ಪ್ರತಿಯೊಬ್ಬನು ಗಮನಿಸಬೇಕಾದುದೇನೆಂದರೆ ಭಾಷಣಗಾರರು ಮತ್ತು ವಿದ್ವಾಂಸರು ಬಹಳ ಸಮಯ ಕಷ್ಟಪಟ್ಟು ಸಿದ್ಧಪಡಿಸಿದ ಭಾಷಣಗಳನ್ನು ಗಮನವಿಟ್ಟು ಆಲಿಸಬೇಕು ಮತ್ತು ಅವುಗಳನ್ನು ನೆನಪಿನಲ್ಲಿಡಬೇಕು. ಭಾಷಣಗಳನ್ನು ಆಲಿಸುವ ಪುರುಷರು ಮತ್ತು ಮಹಿಳೆಯರು ಈ ಭಾಷಣಗಳಲ್ಲಿ ಪ್ರಸ್ತಾಪಿಸಲಾದ ವಿಷಯಗಳಲ್ಲಿ ಅರ್ಧಾಂಶವನ್ನಾದರೂ ನೆನಪಿನಲ್ಲಿಟ್ಟುಕೊಂಡರೆ ತಮ್ಮ ಜ್ಞಾನ, ಧರ್ಮ ಮತ್ತು ಆಧ್ಯಾತ್ಮಿಕ ಮಟ್ಟವನ್ನು ಹಲವು ಪಟ್ಟು ವರ್ಧಿಸಲು ಸಾಧ್ಯವಾಗುವುದು ಎಂದು ನಾನು ಭಾವಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸಹ ಒಂದು ಸಂದರ್ಭದಲ್ಲಿ ಭಾಷಣಗಳನ್ನು ಎಲ್ಲರೂ ಶ್ರದ್ಧೆಯಿಟ್ಟು ಆಲಿಸಬೇಕು ಎಂದು ಹೇಳಿರುವರು. ಅವರು ಹೇಳಿದರು: ಎಲ್ಲರೂ ಶ್ರದ್ಧೆಯಿಂದ ಆಲಿಸಬೇಕು. ಏಕೆಂದರೆ ಇದು ಈಮಾನ್‌ಗೆ ಸಂಬಂಧಿಸಿದ ವಿಷಯವಾಗಿದೆ. ಅದರ ಬಗ್ಗೆ ಉದಾಸೀನತೆ, ನಿರ್ಲಕ್ಷ್ಯತೆ ಮತ್ತು ಶ್ರದ್ಧಾಹೀನತೆ ಬಹಳ ಕೆಟ್ಟ ಪರಿಣಾಮವನ್ನು ಸೃಷ್ಟಿಸುತ್ತದೆ. ಯಾರು ವಿಶ್ವಾಸದ ಬಗ್ಗೆ ನಿರ್ಲಕ್ಷ್ಯದಿಂದ ವರ್ತಿಸುತ್ತಾರೋ ತಮ್ಮನ್ನು ಸಂಬೋಧಿಸಿ ಮಾತನಾಡುವಾಗ ಶ್ರದ್ಧೆಯಿಂದ ಯಾರು ಆಲಿಸುವುದಿಲ್ಲವೋ ಅಂತಹ ಜನರಿಗೆ, ಭಾಷಣಗಾರನ ಮಾತುಗಳು ಎಷ್ಟು ಉನ್ನತ ಮಟ್ಟದ್ದಾಗಿದ್ದರೂ ಲಾಭದಾಯಕವಾಗಿದ್ದರೂ ಪ್ರಭಾವಶಾಲಿ ಆಗಿದ್ದರೂ ಅಂತಹ ಜನರಿಗೆ ಅದರಿಂದ ಯಾವ ಲಾಭವೂ ಸಿಗಲಾರದು. ಇಂತಹ ಜನರ ಬಗ್ಗೆಯೇ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ, ಅವರಿಗೆ ಕಿವಿಗಳಿದ್ದರೂ ಅವರು ಆಲಿಸುವುದಿಲ್ಲ, ಅವರಿಗೆ ಹೃದಯವಿದ್ದರೂ ಮನವರಿಕೆ ಮಾಡಿಕೊಳ್ಳುವುದಿಲ್ಲ ಎಂದು ಹೇಳಿರುವನು. ಆದುದರಿಂದ ನೆನಪಿಟ್ಟುಕೊಳ್ಳಿರಿ, ನಿಮ್ಮೊಂದಿಗೆ ಹೇಳುವುದನ್ನು ಬಹಳ ಶ್ರದ್ಧೆಯಿಂದ ಆಲಿಸಿರಿ. ಏಕೆಂದರೆ ಶ್ರದ್ಧೆಯಿಂದ ಆಲಿಸದವನು ದೀರ್ಘಕಾಲದ ತನಕ, ಯಾವ ಮಹಾನುಭಾವರ ಸಹವಾಸದಲ್ಲಿ ಜೀವಿಸಿದರೂ ಅವನಿಗೆ ಯಾವ ಲಾಭವೂ ತಲಪಲಾರದು. ಆದುದರಿಂದ ಜಲ್ಸದ ಕಾರ್ಯಕ್ರಮಗಳನ್ನು ಬಹಳ ಶ್ರದ್ಧೆಯಿಂದ ಆಲಿಸಿರಿ. ಭಾಷಣದಿಂದ ಜ್ಞಾನವರ್ಧನೆ ಆಗುವುದು ಬೌಧಿಕ ಲಾಭವಾಗುವುದು ಎಂದು ಭಾವಿಸಿ ತಾತ್ಕಾಲಿಕ ಜ್ಞಾನವರ್ಧನೆಯ ಲಾಭ ಮಾತ್ರ ನಿಮ್ಮ ಉದ್ದೇಶವಾಗಿರಬಾರದು. ನಮಗೆ ಸ್ಥಿರವಾದ ಜ್ಞಾನ ಸಂಬಂಧವಾದ ಮತ್ತು ಆಧ್ಯಾತ್ಮಿಕ ಲಾಭ ಉಂಟಾಗಲಿ ಎಂಬ ಉದ್ದೇಶದಿಂದ ಭಾಷಣಗಳನ್ನು ಆಲಿಸಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಾವು ನಂಬಲು ಸಾಧ್ಯವಾದುದು ಅಲ್ಲಾಹನು ನಮಗೆ ನೀಡಿದ ಔದಾರ್ಯವಾಗಿದೆ. ನಮಗೆ ಅಲ್ಲಾಹನು ದಯಪಾಲಿಸಿದ ಈ ಔದಾರ್ಯಕ್ಕೆ ಸಂಬಂಧಿಸಿ ನಮ್ಮ ಕರ್ತವ್ಯವೇನೆಂದರೆ ನಾವು ಅಲ್ಲಾಹನ ಸಂಪ್ರೀತಿಯನ್ನು ಮಾತ್ರ ಆಶಿಸುತ್ತಾ ಪ್ರತಿಯೊಂದು ಕೆಲಸವನ್ನು ಮಾಡುವವರಾಗಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಚಿಕ್ಕ ಚಿಕ್ಕ ವಿಷಯಗಳ ಕಡೆಗೆ ನಮ್ಮ ಗಮನವನ್ನು ಹರಿಸಿದುದು ಏಕೆಂದರೆ ಕೆಲವು ಜನರು ಬಲಹೀನತೆಯಿಂದ ಮಾಡುವ ತಪ್ಪು ಕೆಲಸಗಳನ್ನು ಉಳಿದವರೂ ಸಹ ಅನುಸರಿಸುವಂತಾಗದಿರಲಿ ಎಂಬ ಉದ್ದೇಶದಿಂದಾಗಿದೆ. ಕೆಲವು ಜನರು ಜಲ್ಸದಲ್ಲಿ ಕುಳಿತು ಭಾಷಣವನ್ನು ಆಲಿಸದೆ ಪರಸ್ಪರ ಮಾತುಕತೆಯಲ್ಲಿ ಮಗ್ನರಾಗಿರುವುದನ್ನು ಕಂಡು ಹೊಸ ಪೀಳಿಗೆಯ ಜನರು ಜಲ್ಸದೊಳಗೆ ಕುಳಿತು ಮಾತನಾಡುವುದು ಅನುಮತಿಸಲಾಗಿದೆ ಎಂದು ಭಾವಿಸದಿರಲಿ ಎನ್ನುವುದಕ್ಕಾಗಿದೆ.

ನಾನು ಈ ಎಲ್ಲ ವಿಷಯಗಳನ್ನು ಪ್ರಸ್ತಾಪಿಸುವುದು ನಿಮಗೆಲ್ಲರಿಗೂ ನೆನಪಿಸಿಕೊಡಲಿಕ್ಕಾಗಿದೆ. ಯಾರಲ್ಲಾದರೂ ಬಲಹೀನತೆ ಇದ್ದರೆ ಅದು

ದೂರ ಸರಿಯಲಿಕ್ಕೋಸ್ಕರವಾಗಿದೆ. ನಮ್ಮ ಹೊಸ ಪೀಳಿಗೆ, ಎಂದರೆ ನಮ್ಮ ಯುವ ಜನರು ಮತ್ತು ಮಕ್ಕಳು ಜಲ್ಸದ ಮಹತ್ವವನ್ನು ಅರಿತುಕೊಳ್ಳಬೇಕು. ನಮ್ಮ ಜಲ್ಸಗಳು ಜ್ಞಾನ ಮತ್ತು ಆಧ್ಯಾತ್ಮಿಕ ಅಭಿವೃದ್ಧಿಯನ್ನು ಉಂಟುಮಾಡುವುದಿಲ್ಲವಾದರೆ ಮತ್ತು ಮಾನವೀಯ ದೌರ್ಬಲ್ಯದ ಕಾರಣದಿಂದ ನಮ್ಮ ಪೈಕಿ ಕೆಲವರು ಭಾಷಣಗಾರರ ಭಾಷಣಗಳಿಂದ ಸರಿಯಾದ ಲಾಭವನ್ನು ಗಳಿಸುವುದಿಲ್ಲವಾದರೆ ಇದು ಚಿಂತಾರ್ಹವಾದ ವಿಷಯವಾಗಿದೆ.

ಅಲ್ಲಾಹನು ಭಾಷಣಗಾರರ ನಾಲಗೆಯಲ್ಲಿಯೂ ಅನುಗ್ರಹ ನೀಡಲಿ. ಅವರು ತಮಗೆ ವಹಿಸಿಕೊಟ್ಟ ವಿಷಯಗಳನ್ನು ಆಲಿಸುವವರ ಮನಸ್ಸಿಗೆ ಇಳಿಸುವವರಾಗಲಿ. ಮತ್ತು ಕೇಳುವವರ ಮೇಲೆ ಪ್ರಭಾವ ಬೀರುವವರಾಗಲಿ. ಭಾಷಣಗಾರರ ವಿಷಯಗಳು ಅಲ್ಲಾಹನಿಗೆ ಮತ್ತು ಅವನ ಸಂದೇಶವಾಹಕರಿಗೆ ಸಂಬಂಧಿಸಿದವುಗಳಾಗಿವೆ. ಅವು ಪ್ರೀತಿ ಮತ್ತು ನಿಷ್ಠೆಯ ಬಗ್ಗೆ ವಿವರಣೆಗಳಾಗಿವೆ. ಅವು **ತಅಲ್ಲುಖ್ ಬಿಲ್ಲಾಹ್** (ಅಲ್ಲಾಹನೊಂದಿಗೆ ಸಂಬಂಧ) ಬಗ್ಗೆ ವಿವರಣೆಗಳಾಗಿವೆ. ಅವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಪ್ರೀತಿಗೆ ಸಂಬಂಧಿಸಿದವುಗಳಾಗಿವೆ. ಅವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗುಲಾಮನಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿದ ವಿಷಯಗಳಾಗಿವೆ. ಆದುದರಿಂದ ಜಲ್ಸಕ್ಕೆ ಆಗಮಿಸುವ ಪ್ರತಿಯೊಬ್ಬನು ಜಲ್ಸದ ಈ ಮೂರು ದಿನಗಳ ಕಾಲ ಲೌಕಿಕ ವಿಷಯಗಳನ್ನು ಮರೆತುಬಿಡಬೇಕು ಮತ್ತು ತನ್ನ ಧಾರ್ಮಿಕ ಮತ್ತು ಆಧ್ಯಾತ್ಮಿಕ ಮಟ್ಟವನ್ನು ವರ್ಧಿಸಲು ದೃಢನಿರ್ಧಾರ ಮಾಡಬೇಕು. ಅಲ್ಲಾಹನು ಎಲ್ಲರಿಗೂ ಹೀಗೆ ಮಾಡುವ ಭಾಗ್ಯ ನೀಡಲಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸೇವೆಗೋಸ್ಕರ ಸ್ವಯಂ ಸೇವಕರಾಗಿ ತಮ್ಮನ್ನು ಅರ್ಪಿಸುವವರಲ್ಲಿ ಶಾಲೆ, ಕಾಲೇಜು, ಯುನಿವರ್ಸಿಟಿಗಳ ವಿದ್ಯಾರ್ಥಿಗಳೂ ಸೇರಿದ್ದಾರೆ. ಬಹಳ ಜನರು ಉದ್ಯಮಿಗಳಾಗಿದ್ದಾರೆ. ಕೆಲವು ಜನರು ನೌಕರಿ ಮಾಡುವವರಾಗಿದ್ದಾರೆ. ಮತ್ತೆ ಕೆಲವರು ದೊಡ್ಡ ದೊಡ್ಡ ಹುದ್ದೆಗಳಲ್ಲಿರುವವರೂ ಇದ್ದಾರೆ. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಸೇವೆ ಮಾಡುವ ಮನೋಭಾವ ಶಾಲೆಯ ಒಬ್ಬ ವಿದ್ಯಾರ್ಥಿಯನ್ನು, ಒಬ್ಬ ಕಾರ್ಮಿಕನನ್ನು, ಒಬ್ಬ ವ್ಯಾಪಾರಿಯನ್ನು, ಒಬ್ಬ ಉನ್ನತ ಅಧಿಕಾರಿಯನ್ನು ಸಮತಲದಲ್ಲಿ ನಿಲ್ಲಿಸುತ್ತದೆ. ಆದುದರಿಂದ ಕೆಲವು ಸಾರಿ ಕಾರ್ಯಕರ್ತರೊಂದಿಗೆ ತಪ್ಪಾಗಿ ವರ್ತಿಸುವ ಅತಿಥಿ, ತನ್ನ ಉದ್ವೇಗಗಳನ್ನು ನಿಯಂತ್ರಿಸಬೇಕು ಮತ್ತು ಕಾರ್ಯಕರ್ತರ ಆತ್ಮಗೌರವದ ಬಗ್ಗೆ ಗಮನಿಸಬೇಕು. ನಿಸ್ಸಂಶಯವಾಗಿಯೂ ಕಾರ್ಯಕರ್ತರೊಂದಿಗೆ ಅವರು ಯಾವಾಗಲೂ ಸಹನೆಯಿಂದಲೂ ಧೈರ್ಯದಿಂದಲೂ ವರ್ತಿಸಬೇಕೆಂದು ಉಪದೇಶಿಸಲಾಗುತ್ತಿದೆ. ಆದರೆ ಮಾನವ ಸಹಜವಾದ ಗುಣಗಳ ಕಾರಣ ಕೆಲವು ಸಂದರ್ಭಗಳಲ್ಲಿ ಕೆಲವು ಕಾರ್ಯಕರ್ತರು ಕಠಿಣವಾಗಿ ಉತ್ತರ ಹೇಳುತ್ತಾರೆ. ಆದುದರಿಂದ ಅತಿಥಿಗಳು ಕಾರ್ಯಕರ್ತರನ್ನು ಗೌರವಿಸಬೇಕು. ಮತ್ತು ಯಾವುದಾದರೂ ಅನಿಷ್ಟ ಸಂಭವ ಉಂಟಾಗದಂತೆ ಗಮನಿಸಬೇಕು. ಮಕ್ಕಳು ಮತ್ತು ಯುವಜನರು ಸೇವೆ ಮಾಡುವ ಮನೋಭಾವದಿಂದ ಕೆಲಸ ಮಾಡಲು ಬರುತ್ತಾರೆ. ಆದರೆ ಕೆಲವು ಸಾರಿ ಅತಿಥಿಗಳ ತಪ್ಪು ವರ್ತನೆಯ ಕಾರಣ ಅವರಲ್ಲಿ ಬೇಸರ ತಲೆದೋರುತ್ತದೆ. ಜಲ್ಸದಲ್ಲಿ ಸೇರಲು ಆಗಮಿಸುವ ಅಹ್ಮದಿಗಳು ನಿಶ್ಚಯವಾಗಿಯೂ ಒಂದು ರೀತಿಯಲ್ಲಿ ಅತಿಥಿಗಳೇ ಆಗಿದ್ದಾರೆ. ಆದರೆ ಅವರ ಉದ್ದೇಶ ಅತಿಥಿಯಾಗಿ ಮಾತ್ರ ಇರುವುದಾಗಿರಬಾರದು. ಅವರು ಆಗಮಿಸುವುದು ಜಲ್ಸದ ಬರ್‌ಕತ್‌ಗಳಿಂದ ಪಾಲು ಪಡೆಯಲಿಕ್ಕಾಗಿದೆ. ಆದುದರಿಂದ ಅವರ ವಾಸ್ತವ್ಯಕ್ಕೆ ಸಂಬಂಧಿಸಿ, ಊಟೋಪಚಾರ ಮೊದಲಾದವುಗಳಿಗೆ ಸಂಬಂಧಿಸಿ, ವಾಹನಗಳ ಪಾರ್ಕಿಂಗ್‌ಗೆ ಸಂಬಂಧಿಸಿ ಯಾವುದಾದರೂ ಕಷ್ಟ ಉಂಟಾದರೆ ತೆರೆದ ಹೃದಯದೊಂದಿಗೆ ಧೈರ್ಯದಿಂದ ಕಷ್ಟ ಸಹಿಸಬೇಕು. ರಬ್ವದಲ್ಲಿ ಜಲ್ಸ ನಡೆಯುತ್ತಿದ್ದಾಗ ಅಥವಾ ಖಾದಿಯಾನಿನಲ್ಲಿ ಜಲ್ಸ ನಡೆಯುವಾಗ ಚಳಿಗಾಲದಲ್ಲಿ ಮೇಲ್ಛಾವಣಿ ಇಲ್ಲದ ತೆರೆದ ಸ್ಥಳದಲ್ಲಿ ಮತ್ತು ಕೆಲವು ಸಾರಿ ಮಳೆ ಸುರಿಯುವಾಗ ಜಲ್ಸದ ಕಾರ್ಯಕ್ರಮಗಳನ್ನು ಆಲಿಸುತ್ತಾರೆ ಮತ್ತು ಚಳಿ ಸಹಿಸುತ್ತಾರೆ. ಜಲ್ಸಕ್ಕೆ ಬಂದು ಸೇರುವವರು ಚಿಕ್ಕಪುಟ್ಟ ಕಷ್ಟಗಳನ್ನು ಅನುಭವಿಸಬೇಕಾಗಿ ಬಂದಲ್ಲಿ ಅವುಗಳನ್ನು ಸಹಿಸಲೇಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವಿಧ ವಸ್ತುಗಳನ್ನು ಆವಶ್ಯಪಡುತ್ತಿರುವ ಜನರೊಂದಿಗೆ ಒಮ್ಮೆ ಹೀಗೆ ಹೇಳಿದರು: ಇಲ್ಲಿಗೆ ಬರುವ ಯಾವುದಾದರೂ ಅತಿಥಿ ಇಲ್ಲಿ ಸುಖ ಸೌಲಭ್ಯಗಳಿವೆ, ತಂಪಾದ ಶರಬತ್ತು ಸಿಗುತ್ತದೆ ಅಥವಾ ಒಳ್ಳೆಯ ಊಟ ಸಿಗುತ್ತದೆ ಎಂಬ ಉದ್ದೇಶದಿಂದ ಬರುವುದಾದರೆ ಅವನು ಬರುವುದು ಅವುಗಳಿಗೋಸ್ಕರ ಮಾತ್ರವಾಗಿರುತ್ತದೆ. ಅತಿಥಿಗಳಿಗೆ ಸಾಧ್ಯವಿರುವಷ್ಟು ಅನುಕೂಲತೆ ಒದಗಿಸುವುದು ಆತಿಥೇಯನಿಗೆ ಕಡ್ಡಾಯವಾಗಿದೆ. ಆದರೆ ಅತಿಥಿ ಸ್ವತಃ ಹಾಗೆ ಭಾವಿಸುವುದು ಅವರಿಗೇ ಹಾನಿಕರವಾಗಿದೆ. ಆದುದರಿಂದ ಇಲ್ಲಿಗೆ ಆಗಮಿಸಿದ ಅತಿಥಿಗಳು ತಮಗೆ ದೊರೆತ ಸೌಲಭ್ಯಗಳಿಗೆ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಬೇಕು. ರಾತ್ರಿ ಹಗಲು ದುಡಿದು ಪ್ರತಿಯೊಂದು ವಿಭಾಗದಲ್ಲಿ ಅತಿಥಿ ಸತ್ಕಾರದ ವ್ಯವಸ್ಥೆಯನ್ನು ಮಾಡುತ್ತಿರುವ ಕಾರ್ಯಕರ್ತರಿಗೆ ಕೃತಜ್ಞತೆ ಅರ್ಪಿಸಬೇಕು. ಜಲ್ಸದ ಮೂರು ದಿನಗಳಲ್ಲಿ ಅತಿಥಿಗಳು ಮಾಡಬೇಕಾದ ಪ್ರಯತ್ನವೇನೆಂದರೆ ಅಲ್ಲಾಹನ ಪ್ರೀತಿ ಸಂಪಾದಿಸಲು ಏನೆಲ್ಲಾ ಮಾಡಬೇಕು ಎಂಬುದರ ಬಗ್ಗೆಯಾಗಿದೆ. ಅಲ್ಲಾಹನ ಅನುಗ್ರಹಗಳನ್ನು ಯಾಚಿಸುತ್ತಾ ಅವನಿಂದ ಒಳಿತನ್ನು ಬೇಡುತ್ತಾ ಈ ದಿನಗಳನ್ನು ಕಳೆಯಿರಿ. ಎಲ್ಲ ಕೆಡುಕುಗಳಿಂದ ರಕ್ಷಣೆಯನ್ನು ಬೇಡಿಕೊಳ್ಳುತ್ತಾ ಈ ದಿನಗಳನ್ನು ಕಳೆಯಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿರುವರು– ಒಬ್ಬನು ಒಂದು ಸ್ಥಳದಲ್ಲಿ ವಾಸಿಸಲು ತೊಡಗುವಾಗ ಅಥವಾ ತಾತ್ಕಾಲಿಕ ವಾಸಕ್ಕೆ ಡೇರೆ ಹಾಕುವಾಗ ಹೀಗೆ ಪ್ರಾರ್ಥಿಸಬೇಕು: ನಾನು ಅಲ್ಲಾಹನ ಪರಿಪೂರ್ಣ ವಚನಗಳ ಆಶ್ರಯ ಬೇಡಿಕೊಳ್ಳುತ್ತೇನೆ. ಹೀಗೆ ಪ್ರಾರ್ಥಿಸಿದರೆ ಆತನು ಅಲ್ಲಿಂದ ವಾಸಸ್ಥಾನ ಬದಲಾಯಿಸುವ ತನಕ ಅಥವಾ ತಾತ್ಕಾಲಿಕ ವಾಸವನ್ನು ಬಿಡುವ ತನಕ ಯಾವುದೇ ಹಾನಿ ಉಂಟಾಗಲಾರದು. ಆದುದರಿಂದ ಎಲ್ಲ ರೀತಿಯ ಹಾನಿಗಳಿಂದ ರಕ್ಷಣೆ ಪಡೆಯಲು ಪ್ರಾರ್ಥಿಸುತ್ತಾ ಇರಬೇಕು.

ಪ್ರಾರ್ಥನೆಗಳು ಅಂಗೀಕಾರ ಪಡೆಯಲು ಅಲ್ಲಾಹನ ಆರಾಧನೆ ಮಾಡುವುದು ಆವಶ್ಯಕವೆಂದು ಪ್ರತಿಯೊಬ್ಬನಿಗೆ ತಿಳಿದಿದೆ. ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದು ಸಹ ಆವಶ್ಯಕವಾಗಿದೆ. ಆದುದರಿಂದ ಈ ರೀತಿ ನೀವು ಈ ದಿನಗಳನ್ನು ಕಳೆಯಿರಿ. ಈ ದಿನಗಳಲ್ಲಿ ಮಾತ್ರವಲ್ಲ ಇಲ್ಲಿ ನಿಮಗುಂಟಾದ ಅಭ್ಯಾಸ ನಿಮ್ಮ ಜೀವನದ ಸ್ಥಿರ ಭಾಗವಾಗಲಿ.

ಜಲ್ಸಕ್ಕೆ ಬಂದು ಸೇರಿದವರು ಗಮನಿಸಬೇಕಾದ ಮತ್ತೊಂದು ವಿಷಯ, ನಮಾಝ್‌ಗಳಿಗೆ ಸಮಯಕ್ಕೆ ಸರಿಯಾಗಿ ಬಂದು ಕುಳಿತುಕೊಳ್ಳಬೇಕು. ತಡವಾಗಿ ಬಂದು ನೂಕುನುಗ್ಗಲು

ತಲೆದೋರದಿರಲಿ. ಮೊದಲು ಬಂದು ಕುಳಿತು ಕೊಳ್ಳುವವರು **ಝಿಕ್ರೆ ಇಲಾಹಿ** (ಅಲ್ಲಾಹನ ನಾಮಸ್ಮರಣೆ) ಮತ್ತು ದುಆಗಳನ್ನು ಮಾಡುತ್ತಾ ಇರಬೇಕು. ಹಾಗೆ ಮಾಡುವುದು ಪುಣ್ಯದಾಯಕವಾಗಿದೆ. ಅಲ್ಲಾಹನು ಚಿಕ್ಕದಾದ ಪ್ರತಿಯೊಂದಕ್ಕೆ ಸಹ ಪ್ರತಿಫಲ ನೀಡುತ್ತಾನೆ. ಮಸ್‌ಜಿದ್‌ಗಳಲ್ಲಿ ನಮಾಝ್‌ಗೋಸ್ಕರ ಕುಳಿತುಕೊಂಡು ಇರುವುದು ಸಹ ಪುಣ್ಯಕರವಾಗಿದೆ. ಆದುದರಿಂದ ಈ ಪುಣ್ಯವನ್ನು ಕಳೆದುಕೊಳ್ಳಬಾರದು. ಈ ಮೂರು ದಿನಗಳನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಬೇಕಾದುದು ಹೀಗೆಯೇ ಆಗಿದೆ. ಅದಕ್ಕೆ ಬದಲಾಗಿ ಹೊರಗೆ ನಿಂತು ಅಲ್ಲಿ ಇಲ್ಲಿ ಮಾತುಗಳಲ್ಲಿ ಮಗ್ನರಾಗುವುದು, ನಾನು ಆಗಮಿಸಿ ನಮಾಝ್ ಆರಂಭಿಸಿದಾಗ ಒಳಗೆ ಬರಲು ಪ್ರಾರಂಭಿಸುವುದು ಸರಿಯಾದ ಕ್ರಮವಲ್ಲ. ನೆಲಕ್ಕೆ ಮರದ ಹಲಗೆ ಹಾಸಿರುವುದರಿಂದ ಅಂತಹ ಸಂದರ್ಭಗಳಲ್ಲಿ ನಮಾಝ್ ಮಾಡುತ್ತಾ ಇರುವವರಿಗೆ ನಮಾಝ್ ಮಾಡಲು ಕಷ್ಟವಾಗುತ್ತದೆ. ಇದೇ ರೀತಿ ಜಲ್ಸದ ಕಾರ್ಯಕ್ರಮಗಳ ಸಂದರ್ಭಗಳಲ್ಲಿ ಮತ್ತು ನಮಾಝ್‌ಗಳ ಸಮಯದಲ್ಲಿ ನಿಮ್ಮ ಫೋನ್ ಸ್ಥಗಿತಗೊಳಿಸಿರಿ. ಕನಿಷ್ಠಪಕ್ಷ ಶಬ್ದ ಹೊರಡಿಸದಂತೆ ಮಾಡಿರಿ.

ತಮ್ಮ ಕಾರುಗಳಲ್ಲಿ ಆಗಮಿಸುವವರು ಟ್ರಾನ್ಸ್‌ಪೋರ್ಟ್ ವಿಭಾಗದವರಿಗೆ ಪೂರ್ಣ ಸಹಕಾರ ನೀಡಬೇಕು. ವ್ಯವಸ್ಥಾಪಕರಿಗೆ ಯಾವುದೇ ರೀತಿಯ ಕಷ್ಟವಾಗದಂತೆ ನೋಡಿಕೊಳ್ಳಬೇಕು. ವ್ಯವಸ್ಥೆಯನ್ನು ಉತ್ತಮಗೊಳಿಸಲು ಜಲ್ಸದಲ್ಲಿ ಭಾಗವಹಿಸುವವರ ಸಹಕಾರ ಆವಶ್ಯಕವಾಗಿದೆ. ಸ್ಕೇನಿಂಗ್ ವಿಭಾಗದವರೊಂದಿಗೆ ಸಹ ಪೂರ್ಣ ರೂಪದಲ್ಲಿ ಸಹಕರಿಸಿರಿ. ಇಲ್ಲಿ ಮಾಡುವ ಎಲ್ಲ ವ್ಯವಸ್ಥೆಗಳು ಜಲ್ಸಕ್ಕೆ ಆಗಮಿಸುವವರ ಅನುಕೂಲತೆಗಳಿಗೋಸ್ಕರ ಮತ್ತು ಸಂರಕ್ಷಣೆಗೋಸ್ಕರ ಮಾಡಲಾಗುತ್ತಿದೆ. ಅಹ್ಮದಿಯಾ ಜಮಾಅತಿನ ಸೌಂದರ್ಯವಿರುವುದು ಪ್ರತಿಯೊಬ್ಬ ಅಹ್ಮದಿ ಜಲ್ಸ ವ್ಯವಸ್ಥೆಯ ಭಾಗವಾಗಿರುವುದಲ್ಲಿ. ಕಾರ್ಯಕರ್ತರೂ ಜಲ್ಸಕ್ಕೆ ಬಂದ ಇತರ ಅತಿಥಿಗಳೂ ಜಲ್ಸದ ಭಾಗವೇ ಆಗಿದ್ದಾರೆ. ಪಾರ್ಕಿಂಗ್ ಮತ್ತು ಸ್ಕಾನಿಂಗ್ ಸ್ಥಳಗಳಲ್ಲಿ, ಭೋಜನ ಶಾಲೆಗಳಲ್ಲಿ, ಮತ್ತು ಜಲ್ಸಗಾಹ್‌ನಲ್ಲಿ ಪ್ರತಿಯೊಂದು ಕ್ಷಣದಲ್ಲಿ ಪ್ರತಿಯೊಬ್ಬನು ಎಚ್ಚರದಿಂದಿರಬೇಕಾದುದು ಆವಶ್ಯಕವಾಗಿದೆ. ನಿಮ್ಮ ಸುತ್ತಮುತ್ತಲೂ ದೃಷ್ಟಿ ಇರಿಸುವುದು ಆವಶ್ಯಕವಾಗಿದೆ. ಎಲ್ಲಿಯಾದರೂ ಯಾವುದಾದರೂ ಅಸಾಮಾನ್ಯ ವಸ್ತುವನ್ನು ಕಂಡರೆ ಅಥವಾ ಯಾರದಾದರೂ ಅಸಾಮಾನ್ಯ ವರ್ತನೆಯನ್ನು ಕಂಡರೆ ತಕ್ಷಣ ವ್ಯವಸ್ಥಾಪಕರಿಗೆ ತಿಳಿಸಿ ಎಚ್ಚರಗೊಳಿಸಿರಿ ಮತ್ತು ನೀವು ಸಹ ಎಚ್ಚರಿಕೆಯಿಂದ ವರ್ತಿಸಿರಿ.

ಜಲ್ಸದ ಸಮಯದಲ್ಲಿ ಜಮಾಅತಿನ ಕೆಲವು ವಿಭಾಗಗಳು ಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. ಚರಿತ್ರೆ ವಿಭಾಗದ ಪ್ರದರ್ಶನ ಸಹ ಇಲ್ಲಿದೆ. ರಿವ್ಯೂ ಆಫ್ ರಿಲೀಜಿಯನ್ಸ್, ಪವಿತ್ರ ಖುರ್‌ಆನಿನ ಪ್ರತಿಗಳು ಮತ್ತು ಹಝ್ರತ್ ಈಸಾ ಅಲೈಹಿಸ್ಸಲಾಮರ ಕಫನಿಗೆ (ಶವ ವಸ್ತ್ರಕ್ಕೆ) ಸಂಬಂಧಿಸಿದ ಪ್ರದರ್ಶನ ಏರ್ಪಡಿಸಿದೆ. ಕಳೆದ ವರ್ಷದ ಪ್ರದರ್ಶನಕ್ಕಿಂತ ಈ ವರ್ಷದ ಪ್ರದರ್ಶನ ಪ್ರಾಯಶಃ ಉತ್ತಮವಾಗಿರಬಹುದು. ಇವೆರಡು ತಮ್ಮ ವಲಯಗಳಲ್ಲಿ ಜ್ಞಾನವರ್ಧಕಗಳಾಗಿವೆ. ಪುರುಷರಿಗೂ ಮಹಿಳೆಯರಿಗೂ ಸಂದರ್ಶನಕ್ಕೆ ಬೇರೆ ಬೇರೆ ಸಮಯ ನಿಶ್ಚಯಿಸಲಾಗಿದೆ. ಈ ಪ್ರದರ್ಶನಗಳಿಂದ ಲಾಭ ಪಡೆಯಲು ಪ್ರಯತ್ನಿಸಿರಿ.

ನಾನು ಪುನಃ ಹೇಳುತ್ತೇನೆ ಪ್ರಾರ್ಥನೆಗಳ ಬಗ್ಗೆ ವಿಶಿಷ್ಟವಾಗಿ ಗಮನ ಹರಿಸಿರಿ. ನಮಾಝ್ ಮತ್ತು ನಫ್ಲ್‌ಗಳನ್ನು ಮಾತ್ರವಲ್ಲ ಝಿಕ್ರೆ ಇಲಾಹಿ ಮತ್ತು ದುರೂದ್ ಶರೀಫ್ ಪಠಿಸುವ ಬಗ್ಗೆ ಮತ್ತು ಬೇರೆ ಪ್ರಾರ್ಥನೆಗಳನ್ನು ಮಾಡುವ ಬಗ್ಗೆ ಗಮನ ಹರಿಸಿರಿ.

ಅಲ್ಲಾಹನು ಈ ಜಲ್ಸವನ್ನು ಪ್ರತಿಯೊಂದು ರೀತಿಯಲ್ಲಿಯೂ ಅನುಗ್ರಹದಾಯಕವನ್ನಾಗಿ ಮಾಡಲಿ. ಅಲ್ಲಾಹನು ನಮ್ಮ ಎಲ್ಲ ಪ್ರಾರ್ಥನೆಗಳನ್ನು ಸ್ವೀಕರಿಸಲಿ. ಮತ್ತು ನಮ್ಮನ್ನು ಪ್ರತಿಯೊಂದು ರೀತಿಯ ಕೆಡುಕಿನಿಂದ ರಕ್ಷಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*at Hadeeqatul Mahdi, London on 12-08-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon